


International Journal of Kannada Research
www.kannadajournal.com

**ISSN: 2454–5813**
IJSR 2015; 1(3): 19-21
© 2015 IJKS
www.kannadajournal.com
Received: 05-10-2015
Accepted: 06-11-2015

**Dr. BK Manjula**
Asst. Professor, Department of Kannada, Shri Bhagavan Mahaveer Jain College, Robertson Pete, Geeta Road, K.G.F.-563122.

**Correspondence**
**Dr. BK Manjula**
Asst. Professor, Department of Kannada, Shri Bhagavan Mahaveer Jain College, Robertson Pete, Geeta Road, K.G.F.-563122.

# ಬಾನುಮುಷ್ತಾಕ್ಅವರಕಥನ ಸಾಹಿತ್ಯದ ಸ್ತ್ರೀಸಂವೇದನೆ

**Dr. BK Manjula**

**ಸಾರಾಂಶ**
ಆಧುನಿಕಕನ್ನಡಕಥಾಸಾಹಿತ್ಯವು ವಿಫುಲವು, ವೈವಿಧ್ಯವು ಆಗಿ ಬೆಳೆಯುತ್ತಾ ಭಾರತೀಯ ಸಮಾಜದಎಲ್ಲಾಧರ್ಮ, ಸಂಸ್ಕೃತಿಗಳನ್ನುಪ್ರತಿನಿಧಿಕರಿಸುತ್ತಿರುವುದುಕಂಡುಬರುತ್ತದೆ. ಹಾಗೂ ಅಲಕ್ಷಿತಕ್ಕೆ ಒಳಗಾದ ಸಮಾಜ, ಜನ, ಮೂಲಭೂತವಾದಿಗಳ ದಬ್ಬಾಳಿಕೆ, ಶೋಷಣೆಗಳನ್ನು ಆಯಾ ವರ್ಗ, ಸಮಾಜಗಳಿಂದ ಬಂದ ಬರಹಗಾರರು ಅನಾವರಣಗೊಳಿಸಿದ್ದಾರೆ. ಮುಸ್ಲಿಂ ಲೋಕದ ಬದುಕನ್ನು, ತಾವುಕಂಡ, ತಮ್ಮಅನುಭವಕ್ಕೆ ಬಂದದ್ದನ್ನು ಬಾನುಮುಷ್ತಾಕ್ಕಥಾರೂಪವನ್ನು ನೀಡಿದ್ದಾರೆ. ಬಾನುಮುಷ್ತಾಕ್ಅವರ 'ಬೆಂಕಿ ಮಳೆ' ಕಥಾಸಂಕಲನದ ಕಥೆಗಳಲ್ಲಿನ ಆಧುನಿಕತೆ, ಸಂಸ್ಕೃತಿ, ಬುರ್ಕಾ, ಖತ್ನಗಳವಿಚಾರ ಮತ್ತು ಪ್ರತಿಭಟನೆಯ ನೆಲೆಗಳನ್ನು ಕುರಿತುಅಧ್ಯಯನ ಮಾಡಲಾಗಿದೆ. ಸ್ತ್ರೀಶಿಕ್ಷಣ, ಸ್ತ್ರೀಸ್ವಾವಲಂನೆ, ಧರ್ಮ, ಮಾನವೀಯತೆ, ಕಾನೂನಿನ ಅರಿವು, ಧಾರ್ಮಿಕಆಚರಣೆಯ ಹಿಂದಿನ ಸ್ವಾರ್ಥತೆಗಳನ್ನು ಇಲ್ಲಿ ಮುಖ್ಯವಾಗಿಗುರುತಿಸಲಾಗಿದೆ.

**ಕೀ ವರ್ಡ್ಸ್:** ಅಲಕ್ಷಿತ, ಮೂಲಭೂತವಾದಿ, ದಬ್ಬಾಳಿಕೆ, ಆಧುನಿಕತೆ, ಪ್ರತಿಭಟನೆ, ಸ್ತ್ರೀಶಿಕ್ಷಣ, ಸ್ತ್ರೀಸ್ವಾವಲಂಬನೆ, ಕಾನೂನು, ಧಾರ್ಮಿಕ.

ಬಾನುಮುಷ್ತಾಕ್ಅವರು ೧೯೪೮ರಂದು ಹಾಸನ ಜಿಲ್ಲೆಯಲ್ಲಿ ಜನಿಸಿದರು. ಲಂಕೇಶ್ ಪತ್ರಿಕೆಯ ಹಾಸನ ಜಿಲ್ಲೆಯ ವರದಿಗಾರರಾಗಿ ಕೆಲಸ ನಿರ್ವಹಿಸಿ ನಂತರ ನ್ಯಾಯವಾದಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಂಡಾಯ ಸಾಹಿತ್ಯ ಸಂದರ್ಭದ ಸಾಹಿತ್ಯಕೃಷಿಯಲ್ಲಿ ತೊಡಗಿಸಿಕೊಂಡ ಬಾನುಮುಷ್ತಾಕ್ರವರಿಗೆ ಅಂದಿನ ಬಂಡಾಯದ ಧೋರಣೆಗಳು ಪ್ರೇರಣೆ ನೀಡಿರುವುದನ್ನುಅವರ ಸಾಹಿತ್ಯದ ಸೃಷ್ಟಿಯಲ್ಲಿಗುರುತಿಸಬಹುದು.

ಬಾನುರವರು 'ಬೆಂಕಿ ಮಳೆ' ಕಥಾಸಂಕಲನದ ಕಥೆಗಳನ್ನು ಕುರಿತು ಹೀಗೆ ಹೇಳಿದ್ದಾರೆ. "ಮಹಿಳೆ ನನ್ನ ಮುಖ್ಯ ಕಾಳಜಿ ಹೀಗಾಗಿ ನನ್ನಎಲ್ಲಾ ಕತೆಗಳಲ್ಲೂ ಅವಳು ವಿರಾಜಿಸಿದ್ದಾಳೆ. ಎಂದು ಹೇಳುವ ಬಾನುರವರ ಕತೆಗಳಲ್ಲಿ ಸ್ತ್ರೀಪರ ಕಾಳಜಿಗಳು, ತಲ್ಲಣಗಳೂ ಅಂತಃವಾಹಿನಿಯಾಗಿ ಹರಿದು ಬಂದಿವೆ. ಸಾರಾರವರ ಸ್ತ್ರೀಪಾತ್ರಗಳು ಧಾರ್ಮಿಕ ಮಿತಿಗಳನ್ನು, ಕಟ್ಟುಪಾಡುಗಳನ್ನು ಮೀರಿದ ಸೌಮ್ಯ ಪಾತ್ರಗಳಾದರೆ, ಬಾನುರವರ ಪಾತ್ರಗಳು ಆ ಮಿತಿಯನ್ನು ಮೀರಿ ವಾಸ್ತವದ ನೆಲೆಯಲ್ಲಿ ಮಾನವೀಕರಣಗೊಳ್ಳುತ್ತವೆ. ಮಾತಿಗೆ ಮೀರಿದ ಮಾನವೀಯ ಕಾಳಜಿಗಳು 'ಬೆಂಕಿ ಮಳೆ' ಸಂಕಲನದ ಎಲ್ಲಾಸ್ತ್ರೀ ಕಥೆಗಳಲ್ಲೂ ವ್ಯಕ್ತವಾಗಿವೆ"೧ ಎಂದುತಮ್ಮ ಸೃಜನಶೀಲತೆಗೆ ಪ್ರೇರಕವಾಗಿರುವುದನ್ನು ಹೇಳಿದ್ದಾರೆ. ತಾವುಕಂಡ, ಕೇಳಿದ,ಅನುಭವದ ಲೋಕವನ್ನುತಮ್ಮಕತೆಗಳಲ್ಲಿ ನಿರೂಪಿಸಿದ್ದಾರೆ.

## ವಿಧಾನ

ಬಾನುಮುಷ್ತಾಕ್ಅವರ ಕಥೆಗಳಲ್ಲಿನ ಆಧುನಿಕತೆ, ಸಂಸ್ಕೃತಿ ಮತ್ತು ಪ್ರತಿಭಟನೆಯ ನೆಲೆಗಳನ್ನುಕುರಿತು ವಿವರಣಾತ್ಮಕ ಮತ್ತು ವಿಮರ್ಶಾತ್ಮಕವಾಗಿಅಧ್ಯಯನ ಮಾಡಲಾಗಿದೆ. ಆಧುನಿಕಕಾಲಘಟ್ಟದಕಥೆಗಾರ್ತಿಯರು ಸತಿಪದ್ಧತಿ, ವಿಧವಾ ವಿವಾಹ, ಸ್ತ್ರೀಶಿಕ್ಷಣ ಮುಂತಾದುವುಗಳನ್ನು ಕುರಿತು ಬರೆಯುತ್ತಿದ್ದವರುಅನಂತರ ಬದಲಾದ ಕಾಲಮಾನಕ್ಕೆತಕ್ಕಹಾಗೆಅಂದಂದಿನ ಸಂಸ್ಕೃತಿಯ ವಿಚಾರಗಳನ್ನು ತಮ್ಮ ಬರಹಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ಪಿತೃಪ್ರಧಾನ ಸಂಸ್ಕೃತಿಯ ಶೋಷಣೆ, ಸ್ತ್ರೀಸ್ವಾತಂತ್ರ್ಯ, ಆರ್ಥಿಕ ಸ್ವಾವಲಂಬನೆ, ಉದ್ಯೋಗಸ್ಥ ಮಹಿಳೆಯ ಸವಾಲುಗಳನ್ನು ಹೆಣ್ಣಿನ ಕಣ್ಣುಗಳಿಂದ ನೋಡುವಿಕೆ ಹಾಗೂ ಸ್ತ್ರೀಪರವಾದ ಕಾಳಜಿ ಪ್ರಧಾನವಾಗಿಅಂತಃಸ್ಥವಾಗಿರುವುದು ಅನೇಕ ಬರಹಗಾರ್ತಿಯರಲ್ಲಿಕಂಡುಬರುತ್ತದೆ. ಈ ಅಂಶಗಳು ಬಾನುಮುಷ್ತಾಕ್ಅವರ ಕಥೆಗಳಲ್ಲೂ ಇದ್ದುಅದನ್ನುಆಧುನಿಕತೆ, ಸಂಸ್ಕೃತಿಗಳ ನೆಲೆಗಳಲ್ಲಿ ಗುರುತಿಸಲಾಗಿದೆ.

’ರಾಹಿಲ ಎಂಬ ಕನ್ಯೆಯಕಥೆ’ಯಲ್ಲಿ ಬಡತನ, ವರದಕ್ಷಿಣೆ ಹಾಗೂ ಜಾತೀಯತೆಯ ವಿಷಮ ಪರಿಸರದಲ್ಲಿಒದ್ದಾಡುವ ಹೆಣ್ಣಿನದುಃಖದ ಮತ್ತುಕಷ್ಟದ ಬದುಕಿನಚಿತ್ರಣವಿದೆ. ’ರಾಹಿಲ’ ಎಂಬ ಕನ್ಯೆಕತೆಯ ಮುಖ್ಯ ಪಾತ್ರವಾಗಿದ್ದು, ಮಧ್ಯಮವರ್ಗದ ಈಕೆ ೧೫೦ ರೂಪಾಯಿವೇತನಕೊಡುವ ಹನಿ ಕಾನ್ವೆಂಟ್‌ನಲ್ಲಿ ಶಿಕ್ಷಕಿಯಾಗಿರುತ್ತಾಳೆ. ತಂದೆ, ತಾಯಿಗೆ ಮದುವೆಚಿಂತೆಕಾಡತೊಡಗುತ್ತದೆ. ಆಗ ತಾಯಿಯ ಸಹೊದ್ಯೋಗಿ ಸೂಚಿಸಿದ ಅಂಗವಿಕಲ ವರ ಶೌಕತನಕಡಿಮೆ ವರದಕ್ಷಿಣೆ ಕೇಳುವ ಸಂಬಂಧದ ಪ್ರಸ್ತಾಪ ಬಂದು ಸಮ್ಮತಿಸುವಷ್ಟರಲ್ಲಿ ಶೌಕತನ ಹೆಚ್ಚು ವರದಕ್ಷಣಿಯೆ ಸಂಬಂಧವನ್ನುಒಪ್ಪಿ ಮದುವೆಯಾಗುತ್ತಾನೆ. ಕಥೆಯಲ್ಲಿ ರಾಹಿಲಳ ಶಾಲೆಯಆಯಾ ಹಪೀಜ ಮತ್ತುಆಕೆಯ ಮಗಳು ಸಬೀಹಳ ಪ್ರಸ್ತಾಪ ಬರುತ್ತದೆ. ಕಡುಬಡವಿಯಾದ ಹಪೀಜಕಷ್ಟಪಟ್ಟು ಮಗಳಿಗೆ ಸಂಬಂಧ ಹುಡುಕಿ ಮದುವೆ ಸಿದ್ಧತೆಗಳನ್ನು ಮಾಡುತ್ತಿರುವಾಗ ವರದಕ್ಷಿಣೆ ವಿಚಾರವಾಗಿ ಮದುವೆ ಮುರಿದು ಬಿದ್ದಾಗ ಸಬೀಹ ಬೇರೊಬ್ಬನೊಂದಿಗೆ ಹೋಗಿ ಮದುವೆಯಾಗುತ್ತಾಳೆ. ಇದೆಲ್ಲದರಿಂದಕನ್ಯೆಯಾಗಿ ಉಳಿಯುವ ರಾಹಿಲಳ ಭಯ, ಸಿಟ್ಟು, ಚಿಂತೆ, ಕೋಪ, ನೋವು ಮುಂತಾದುವನ್ನುಅನುಭವಿಸುವ, ಬದುಕಿನ ಬಗ್ಗೆ ಸ್ವಾರ್ಥವಿರದೇತನ್ನವರ ಹಿತಕ್ಕಾಗಿತನ್ನ ಸುಖವನ್ನುತ್ಯಾಗಮಾಡುವ ಮನೋಭಾವದ ಹೆಣ್ಣಿನಅಂತರಂಗದ ಸಂವೇದನೆಕತೆಯಲ್ಲಿ ವ್ಯಕ್ತವಾಗಿದೆ.

’ಸರಿದಕಾರ್ಮೋಡ’ ಕತೆಯಲ್ಲಿ ಬುರ್ಕಾ ಪದ್ಧತಿಯನ್ನು, ಪುರುಷ ಪ್ರಧಾನ ಸಂಪ್ರದಾಯಗಳನ್ನು ವಿರೋಧಿಸುತ್ತಾಆಧುನಿಕ ಬದುಕಿನತ್ತ ಸಾಗುತ್ತಿರುವಜಬೀನ ಮತ್ತು ನವಾಬ ಕುಟುಂಬವನ್ನುಇಲ್ಲಿ ಗಮನಿಸಬಹುದು. ದಾದಾ ನವಾಬ್‌ನನ್ನು ಬಾಲ್ಯದಿಂದತಂದೆಯಂತೆ ಸಾಕಿ ಬದುಕಿನತೋರಿಸುತ್ತಾನೆ. ಆದರೆ ನವಾಬ್‌ನ ಮದುವೆಯಾದ ನಂತರವುತನ್ನ ಮಾತಿನಂತೆತನ್ನಅಧೀನದಲ್ಲಿಇರಬೇಕೆಂದುದಾದಾ ಬಯಸುತ್ತಾನೆ. ಡ್ರೈವರ್ ಆಗಿ ದುಡಿಯುತ್ತಿದ್ದ ನವಾಬ್‌ಗೆಆತನ ಹೆಂಡತಿ ಜಬೀನಳೆಂದರೆ ಅತಿಯಾದ ಪ್ರೀತಿ. ತುಮಕೂರಿಗೆತನ್ನಅಣ್ಣನ ಮಗಳ ಮಗುವನ್ನು ನೋಡಲುಕರೆದೊಯ್ದು, ಹಿಂತಿರುಗಿರಾತ್ರಿರೈಲಿನಲ್ಲಿ ಪ್ರಯಾಣಿಸಿ ಮನೆಗೆ ಬರುತ್ತಾರೆ. ನವಾಬ್ ಹೇಳಿದಂತೆ ಜಬೀನ ಬುರ್ಕಾಧರಿಸದೆ ಬಂದಕಾರಣವಾಗಿದಾದಾ ನವಾಬ್‌ನನ್ನುಚೆನ್ನಾಗಿ ಹೊಡೆಯುತ್ತಾನೆ. ಅಷ್ಟೇ ಅಲ್ಲದೇ ಹೆರಿಗೆಗಾಗಿತವರಿಗೆ ಹೋದ ಜಬೀನಳನ್ನು ನೋಡದಂತೆತಡೆದು ಮತ್ತೊಂದು ಮದುವೆ ಮಾಡಲುಏರ್ಪಾಡು ಮಾಡಿ ನವಾಬ್‌ನನ್ನು ಬಂಧನದಲ್ಲಿಡುತ್ತಾನೆ. ಆದರೆತನ್ನ ಸ್ನೇಹಿತರ ಸಹಾಯದಿಂದ ತಪ್ಪಸಿಕೊಂಡು ಬಂದುತನ್ನ ಹೆಂಡತಿ ಮತ್ತು ಮಗುವನ್ನು ಸೇರಿದೂರ ಹೋಗಿ ಗಂಜಿಕುಡಿದಾದರೂ ಸುಖವಾಗಿ ಬದುಕೋಣಎಂದು ಹೇಳುತ್ತಾನೆ. ಹೀಗೆ ನವಾಬ್‌ನ ಪಾತ್ರದಲ್ಲಿ ಮೂಲಭೂತವಾದಿತನದವಿರುದ್ಧ ಪ್ರತಿಭಟನೆ,ಮಾನವೀಯತೆ ಸ್ತ್ರೀಪರ ಕಾಳಜಿ ವ್ಯಕ್ತವಾಗಿದೆ.

’ಶಾಯಿಸ್ತ ಮಹಲ್‌ನಕಲ್ಲು ಚಪ್ಪಡಿಗಳು’ ಕತೆಯಲ್ಲಿಇಫ್ತಿಕಾರ್ ಮತ್ತು ಶಾಯಿಸ್ತ ದಂಪತಿಗಳ ಮನೆಗೆ ಮುಜಾಹಿದ್‌ತನ್ನ ಹೆಂಡತಿ ಜೀನತ್‌ಳನ್ನು ಕರೆದುಕೊಂಡುಊಟಕ್ಕೆ ಹೋಗುತ್ತಾನೆ. ಅನಂತರಇಫ್ತಿಕಾರ್‌ಕುಟುಂಬದೊಂದಿಗೆ ಹೆಚ್ಚು ಸ್ನೇಹ ಬೆಳೆಯತೊಡಗುತ್ತದೆ. ಇಫ್ತಿಕಾರ್‌ಗೆ ಈಗಾಗಲೇ ಆರುಜನ ಮಕ್ಕಳಿದ್ದರೂ ತನ್ನ ಹೆಂಡತಿ ಜೀನತ್‌ಳನ್ನು ಅತಿಯಾಗಿ ಪ್ರೀತಿಸುವ ನಟನೆ ಮಾಡುತ್ತಿರುವುದುಅನಂತರ ತಿಳಿದು ಬರುತ್ತದೆ. ಇಫ್ತಿಕಾರ್‌ಗೆಆತನ ಹಿರಿಯ ಮಗಳು ಆಸಿಫ್‌ಳನ್ನು ಸ್ಕೂಲಿನಿಂದ ಬಿಡಿಸುತ್ತಾನೆ. ಆದರೆ ಶಾಹಿಸ್ತಳಿಗೆ ತನ್ನ ಮಗಳು ಓದಿಸಬೇಕೆಂಬ ಬಯಕೆಯಿತ್ತು. ಹಾಗೂ ಶಾಯಿಸ್ತ ಜೀನತ್‌ಳಿಗೆ ಮಕ್ಕಳಾಗದಂತೆ ಆಪರೇಷನ್ ಮಾಡಿಸಿಕೊಳ್ಳಲು ಸಲಹೆಯನ್ನು ಕೊಡುತ್ತಾಳೆ. ಹೀಗೆ ಇಲ್ಲಿನ ಪಾತ್ರಗಳಲ್ಲಿ ತಮ್ಮ ಅನುಕೂಲಕ್ಕೆ ತಕ್ಕಹಾಗೆಧರ್ಮ, ಸಂಪ್ರದಾಯಗಳ ಕಟ್ಟುಪಾಡುಗಳು ಕ್ರಮೇಣ ಸಡಿಲಗೊಳ್ಳುತ್ತಾ ಆಧುನಿಕತೆಯನ್ನು ಮೈಗೂಡಿಸಿಕೊಳ್ಳುತ್ತಿರುವುದು ನಿರೂಪಿತವಾಗಿದೆ. ಇದಕ್ಕೆ ಸ್ತ್ರೀಶಿಕ್ಷಣ ಬಹುಮಟ್ಟಿಗೆಕಾರಣವಾಗಿರುವುದುಕಥೆಯಲ್ಲಿಕಂಡುಬರುತ್ತದೆ.

’ಬೆಂಕಿ ಮಳೆ’ ಕತೆಯಲ್ಲಿಜಮೀಲ ತನ್ನಅಣ್ಣ ಮುತುವಲ್ಲಿ ಸಾಹೇಬರಲ್ಲಿ ಆಸ್ತಿಯ ಪಾಲನ್ನು ಕೇಳುತ್ತಾಳೆ. ಮದುವೆ ಸಂದರ್ಭದಲ್ಲಿ ಸ್ವಲ್ಪ ಆಸ್ತಿಯನ್ನು ಕೊಟ್ಟುಅದ್ದೂರಿಯಾಗಿ ಮದುವೆ ಮಾಡಿಕೊಟ್ಟಿದ್ದರೂ ಮತ್ತೆಜಮೀಲ ಗಂಡನೊಂದಿಗೆ ಬಂದು ಪಾಲನ್ನು ಕೇಳುವುದು ಮುತುವಲ್ಲಿ ಸಾಹೇಬರಿಗೆಆಕ್ರೋಶವನ್ನುಂಟು ಮಾಡುತ್ತದೆ. ಮತ್ತೆ ಮುತುವಲ್ಲಿ ಸಾಹೇಬರ ಮತ್ತೊಬ್ಬತಂಗಿ ಸಕೀನಾ ತನ್ನಅಣ್ಣನ ಮನೆಯ ವೆರಾಂಡದಲ್ಲಿ ನಿಂತು ಅಪರಿಚಿತಳಂತೆ ಸಹಾಯ ಯಾಚಿಸುತ್ತಾಳೆ. ತನ್ನ ಮಗನಿಗೆ ಇಂಜನಿಯರಿಂಗ್‌ಕಾಲೇಜಿನಲ್ಲಿರುವಅಟೆಂಡರ್ ಕೆಲಸ ಕೊಡಿಸುವಂತೆ ಸಾಮಾನ್ಯಳಂತೆ ಬೇಡಿಕೊಳ್ಳುತ್ತಾಳೆ. ಉದ್ಯೋಗದಅವಶ್ಯಕತೆ ಸಕೀನಾಳದಾದರೆ, ಗಂಡನಒತ್ತಾಯದಿಂದ ಆಸ್ತಿಯಲ್ಲಿ ಪಾಲನ್ನು ಕೇಳಲು ಬಂದಿರುವವಳು ಜಮೀಲ. ಇದೆಲ್ಲವನ್ನುಕಂಡ ಮುತುವಲ್ಲಿ ಸಾಹೇಬರಎರಡನೆಯ ಹೆಂಡತಿಆರಿಫ ಹೀಗೆ ಹೇಳುತ್ತಾಳೆ. "ರೀ.... ಮನೆ ಮಗಳನ್ನು ನೋಯಿಸಬೇಡಿ. ಕುರ್‌ಆನ್ ಸ್ಪಷ್ಟವಾಗಿಯೇ ಹೆಣ್ಣು ಮಗಳ ಪಾಲು ಇಂತಿಷ್ಟುಕೊಡಬೇಕುಅಂತಇದೆಯಲ್ಲಾ, ನಿಮ್ಮ ನಾಲ್ವರುತಂಗಿಯರನ್ನು ಕರೆಸಿಕೊಂಡು ಅದೇನುಕೊಡಬೇಕೋಕೊಟ್ಟು ಕೈ ತೊಳೆದುಕೊಳ್ಳಿ. ನಮಗೆ ಇರುವಷ್ಟರಲ್ಲಿಅಲ್ಲಾಹ್ ಬರಕತ್ ಕೊಡ್ತಾನೆ"[೨] ಎಂದು ಶಾಂತವಾಗಿ ಸಲಹೆ ಕೊಡುತ್ತಾಳೆ. ಹೆಣ್ಣಿನ ಪರವಾದ ಕಾಳಜಿ ಮತ್ತುಧರ್ಮ ಹಾಗೂ ಕಾನೂನುಬದ್ಧವಾದ ಹೆಣ್ಣಿನ ಆಸ್ತಿಯ ಹಕ್ಕನ್ನುಕುರಿತಅರಿವಿನ ವಿಚಾರಇಲ್ಲಿ ಮೂಡಿಬಂದಿದೆ.

’ಕರಿನಾಗರಗಳು’ ಕತೆಯಲ್ಲಿ ಅಶ್ರಫ್‌ಳನ್ನು ಯಾಕೂಬ್ ಮದುವೆಯಾಗಿದ್ದ. ಅಶ್ರಫ್‌ಯಾವತಪ್ಪನ್ನು ಮಾಡದಿದ್ದರೂ ಬರಿ ಹೆಣ್ಣ ಮಕ್ಕಳನ್ನು ಹೆತ್ತಕಾರಣಕ್ಕಾಗಿ ಬೇರೆ ಮದುವೆಯಾಗುತ್ತಾನೆ. ಮೂರು ಹೆಣ್ಣು ಮಕ್ಕಳನ್ನು ಕಟ್ಟಿಕೊಂಡುಜೀವನ ನಡೆಸುವುದು ಕಷ್ಟವಾಗಿ ಶ್ರೀಮಂತ ಕುಟುಂಬದಜುಲೇಕ ಬೇಗಂಳ ಮನೆಯಲ್ಲಿ ಕೆಲಸ ಮಾಡುತ್ತಾಳೆ. ಅಶ್ರಫ್‌ಳ ಕತೆಯನ್ನು ಕೇಳಿದ ಜುಲೇಕ ಬುದ್ಧಿಹೇಳಿ ಅರ್ಜಿ ಬರೆದುಕೊಟ್ಟು ಮಸೀದಿಯಲ್ಲಿ ನ್ಯಾಯ ಕೇಳಲು ಹೇಳಿ ಹೀಗೆ ಧೈರ್ಯ ತುಂಬುತ್ತಾಳೆ. "ನೋಡು.... ಯಾವನೇಗಂಡಸು ನಾಲ್ಕು ಮದ್ವೆಯಾಗಬೇಕಾದ್ರೂ.... ಅದಕ್ಕೆ ಸರಿಯಾದಕಾರಣಇರಬೇಕಾಗುತ್ತದೆ. ಯುದ್ಧದ ಕಾಲವಿದ್ದು, ಅನೇಕ ಜನಗಂಡಸರುಯುದ್ಧದಲ್ಲಿ ಸತ್ತಿದ್ದರೆ.... ಆಗ ಗಂಡಸುಒಂದಕ್ಕಿಂತ ಹೆಚ್ಚು ಮದುವೆಯಾಗಬಹುದು.... ಹೆಂಡತಿ ದೀರ್ಘಕಾಲದಿಂದ ವಾಸಿಯಾಗದ ಕಾಯಿಲೆಯಿಂದ ನರಳ್ತಾ ಇದ್ರೆಅಥವ ಬಂಜೆಯಾದ್ರೆಇನ್ನೊಂದು ಮದ್ವೆಯಾಗಬಹುದು.... ಅಥವ ಒಬ್ಬಳಿಂದ ತೃಪ್ತಿ ಸಿಗದಿದ್ದರೆ"[೩] ಎಂದುಇಸ್ಲಾಂಧರ್ಮದಲ್ಲಿ ಶೋಷಣೆಗೆ ಒಳಗಾದ ಅಶ್ರಫ್‌ಳಿಗೆ ತಿಳಿ ಹೇಳುತ್ತಾಳೆ. ಆ ಮಾತುಗಳಿಗೆ ಅಶ್ರಫ್‌ತಾನುಇಲ್ಲಿಯಾವ ಗುಂಪಿಗೂ ಬರುವುದಿಲ್ಲ ನನ್ನನ್ನು ಬಿಟ್ಟಿದ್ದು, ಬೀದಿ ಪಾಲು ಮಾಡಿದ್ದುತಪ್ಪುಅಲ್ವಾ ಮತ್ತೆ ಮುತುವಲ್ಲಿ ಸಾಹೇಬರಿಗೆ ನನ್ನಕಥೆ ಹೇಳಿದರೆ ಯಾಕೆ ನ್ಯಾಯಕೊಡಿಸುತ್ತಿಲ್ಲಎಂದಾಗಜುಲೇಕ ನಮ್ಮ ಅನೇಕ ಜಮ್ಮತ್‌ನವರು, ಮುತುವಲ್ಲಿಗಳು ಕಾನೂನೇನು ಅನ್ನೋದನ್ನು ತಿಳಿದುಕೊಂಡಿಲ್ಲ ಎಂದು ನ್ಯಾಯಯುತವಾಗಿ ಹೇಳುತ್ತಾಳೆ. ಹಾಗೂ ನ್ಯಾಯದಪರವಾಗಿ ಹೋರಾಟವನ್ನು ಮಾಡಲುಧೈರ್ಯ ತುಂಬುತ್ತಾಳೆ. ನ್ಯಾಯದ ಪರವಾಗಿ ಹೋರಾಟ ಮಾಡಲು ಸನ್ನದ್ಧಳಾಗಿರುವ ಸ್ತ್ರೀಯನ್ನು ಹಾಗೂ ಪುರುಷ ಪ್ರಧಾನವಾದ ಸನಾತನ ಬೇರುಗಳಿಗೆ ಕಾನೂನೆಂಬ ಗಟ್ಟಿಕೊಡಲಿ ಪೆಟ್ಟುಗಳನ್ನು ಕೊಡಲು ಮತ್ತು ಸ್ತ್ರೀಅಸ್ತಿತ್ವವನ್ನು ಪ್ರತಿಪಾದಿಸಲೆತ್ನಿಸುವುದನ್ನುಇಲ್ಲಿಕಾಣಬಹುದು.

’ಕೆಂಪು ಲುಂಗಿ’ ಕತೆಯಲ್ಲಿ ಪಟ್ಟಭದ್ರಹಿತಾಸಕ್ತಿಗಳು ಧಾರ್ಮಿಕ ಸಂಗತಿಗಳನ್ನು ತಮ್ಮ ಸ್ವಾರ್ಥ, ಪ್ರತಿಷ್ಟೆಗಳಿಗೆ ದುರುಪಯೋಗ

ಪಡಿಸಿಕೊಳ್ಳುತ್ತಾರೆಂಬುದನ್ನು ಕತೆಗಾರ್ತಿ ನಿರೂಪಿಸಿದ್ದಾರೆ."ಇಲ್ಲಿಯುವರೆಗೂಕನ್ನಡದಲ್ಲಿಕಂಡುಬಂದಿರದ ಹೊಸ ಸಾಂಸ್ಕೃತಿಕ ಲೋಕವನ್ನು 'ಖತ್ನ' ಕತೆತೆರೆದಿಡುತ್ತದೆ. 'ಕೆಂಪು ಲುಂಗಿ' ಕತೆಯಲ್ಲಿಖತ್ನದಕ್ರಿಯೆಯನ್ನು ಬಹಳ ಕಲಾತ್ಮಕವಾಗಿಚಿತ್ರಿಸಲಾಗಿದೆ. ಮೂಲಭೂತವಾದಿಗಳು 'ಖತ್ನ' ಎಂಬ ಧಾರ್ಮಿಕಆಚರಣೆಯ ಹಿಂದಿರುವ ಮುಸ್ಲಿಂ ಮನಸುಗಳನ್ನು ಓಟುಗಳಾಗಿ ಪರಿವರ್ತಿಸಿಕೊಳ್ಳುವ ರಾಜಕೀಯ ಲಾಬಿಗಳನ್ನು ಈ ಹಿನ್ನೆಲೆಯಲ್ಲಿ ನಿರೂಪಿಸುತ್ತಾರೆ. ಮುಸ್ಲಿಂ ಸಮಾಜದಲ್ಲಿಒಂಬತ್ತು ವರ್ಷದೊಳಗಿನ ಗಂಡು ಮಕ್ಕಳ ಶಿಶ್ನದ ಮುಂಬಾಗದತೊಗಲನ್ನುಕತ್ತರಿಸುವುದೇ 'ಖತ್ನ'. ಈ ಆಚರಣೆಯ ವಿವರ ಬಾನು ಆವರು ನೀಡುವುದರೊಂದಿಗೆರಾಜಕೀಯ–ಸಾಮಾಜಿಕ ವಿವಾಹ, ಸಾಮೂಹಿಕ ಮುಂಜಿ, ಸಾಮೂಹಿಕ ಖತ್ನಗಳನ್ನು ಮಾಡಿಸಿ ಓಟು ಗಿಟ್ಟಿಸಿಕೊಳ್ಳುವ ರಾಜಕೀಯ ಹುನ್ನಾರಗಳನ್ನು ಬಯಲುಗೊಳಿಸುತ್ತಾರೆ.೪ ಅಷ್ಟೇ ಅಲ್ಲದೇ ಈ ಕತೆಯಲ್ಲಿ ವರ್ಗತಾರತಮ್ಯ, ಬಡತನದ ಕ್ರೌರ್ಯಗಳು ಚಿತ್ರಿತವಾಗಿವೆ. ಶ್ರೀಮಂತರ ಮಕ್ಕಳಿಗೆ ಸಂಜೆ ವೇಳೆಗೆ ಲೋಕಲ್ಅನಸ್ತೇಷಿಯಾಕೊಟ್ಟು ಹೆಚ್ಚು ನೋವಾಗದಂತೆಆಪರೇಷನ್ ಮಾಡುವಂತೆಡಾಕ್ಟರ್‌ಗೆ ಹೇಳುವುದು ಒಂದೆಡೆಯಾದರೆ ಬಡವರುಆಚರಣೆಯಲ್ಲಿ ಸಿಗುವ ಸವಲತ್ತುಗಳಿಗೆ ಸುಳ್ಳು ಹೇಳಿ, ತಮ್ಮ ಮಕ್ಕಳು ಅತಿಯಾದ ನೋವನ್ನು ಅನಭವಿಸಿದರೂ ಎರಡನೇ ಸಲ ಖತ್ನ ಮಾಡಿಸಲು ಪ್ರಯತ್ನಿಸುವುದುಕಂಡುಬರುತ್ತದೆ.

ಕನ್ನಡಕಥನ ಸಾಹಿತ್ಯದಲ್ಲಿ ಮುಸ್ಲಿಂ ಸಾಹಿತ್ಯದ ಅಭಿವ್ಯಕ್ತಿರೂಪಗಳು ಸೇರುವಿಕೆಯ ಮೂಲಕ ಇಸ್ಲಾಂಸಂಸ್ಕೃತಿಯುಅನಾವರಣವಾಗಿರುವುದುಕಂಡುಬರುತ್ತದೆ.ಬುರ್ಕಾ, ಖತ್ನಗಳ ವಿಚಾರಳನ್ನುಮಾನವೀಯ ನೆಲೆಯಲ್ಲಿ ಚಿತ್ರಿಸಿದ್ದಾರೆ. ಮುಖ್ಯವಾಗಿ ಸ್ತ್ರೀಪಾತ್ರಗಳನ್ನು ಚಿತ್ರಿಸುವಾಗ ಸಹಜವಾಗಿ ಮೃದತನ, ಅಸಹಾಯಕತೆಯಿದೆ. ಪುರುಷ ಪಾತ್ರಗಳಲ್ಲಿ ಒಂದುರೀತಿಯಗಡುಸುತನವಿರುವುದನ್ನು ಗಮನಿಸಬಹುದು. ಇಲ್ಲಿನ ಬಹುಪಾಲು ಪಾತ್ರಗಳು ತಮ್ಮ ಅಸ್ತಿತ್ವದ ಉಳಿವಿಗಾಗಿ ವ್ಯವಸ್ಥೆಯೊಂದಿಗೆಜೀವಪರ ಮತ್ತು ಮಾನವೀಯತೆಯ ಪರವಾಗಿ ಕೆಲವೊಮ್ಮೆ ನೇರ, ಮೌನ ಹೋರಾಟ ನಡೆಸುವ ಮಹಿಳಾ ಮತ್ತುಅಧೀನ ಪುರುಷ ಪಾತ್ರಗಳಾಗಿ ಮೈದಳೆದಿವೆ. ಸ್ತ್ರೀಶಿಕ್ಷಣ, ಸ್ತ್ರೀಸ್ವಾವಲಂಬನೆ, ಧರ್ಮ, ಮಾನವೀಯತೆ, ಕಾನೂನಿನ ಅರಿವು, ಧಾರ್ಮಿಕಆಚರಣೆಯ ಹಿಂದಿನ ಸ್ವಾರ್ಥತೆಗಳ ಅನಾವರಣ ಬಾನು ಅವರ ಮುಖ್ಯ ಕಾಳಜಿಯಾಗಿದೆ.

## ಕೊನೆಟಿಪ್ಪಣಿಗಳು


1. ವಿವಿಧ ಲೇಖಕರು, ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು, ೨ನೇ ಮುದ್ರಣ ೨೦೦೬, ಪುಟ ೧೮೨
2. ಬಾನುಮುಷ್ತಾಕ್, ಬೆಂಕಿ ಮಳೆ, ನೆಲಮನೆ ಪ್ರಕಾಶನ ಶ್ರೀರಂಗಪಟ್ಟಣ, ೧೯೯೯, ಪುಟ ೪
3. ಬಾನುಮುಷ್ತಾಕ್, ಬೆಂಕಿ ಮಳೆ, ನೆಲಮನೆ ಪ್ರಕಾಶನ ಶ್ರೀರಂಗಪಟ್ಟಣ, ೧೯೯೯, ಪುಟ ೨೯
4. ೪. ಕೆ.ಷರೀಫಾ, ಬಂಡಾಯಮುಸ್ಲಿಂ ಸಂವೇದನೆ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪, ಪುಟ ೩೯